ಸಾಕ್ಷಿಯನ್ನು ದಿನಾಂಕ 20.12.2019 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀಸವಾಲುಃ ತೀರ್ಪುದಾರರ ಪರ ವಕೀಲರಿಂದಃ 2016ರಲ್ಲಿ ಈ ಈ ಪ್ರಕರಣ ದಾಖಲು ಮಾಡಿರುವ ವಿಚಾರ ನನಗೆ ಗೊತ್ತಾಗಿರಬಹುದು. ನಮ್ಮೂರಲ್ಲಿ ಈ ಪ್ರಕರಣ ದಾಖಲಾಗಿರುವ ಬಗ್ಗೆ ಮಾತನಾಡುತ್ತಿದ್ದರು ಆಗ ನನಗೆ ಗೊತ್ತಾಯಿತು. ನನ್ನ ಅರ್ಜಿಯಲ್ಲಿ ಈ ರೀತಿ ಗೊತ್ತಾಯಿತೆಂದು ನಮೂದಿಸಿಲ್ಲ. ತೀರ್ಪುದಾರರು ನನ್ನ ವಿರುದ್ಧ ಕಾನೂನುಬಾಹಿರವಾಗಿ ಖಾತೆ ಮಾಡಿಸಿಕೊಂಡಿದ್ದಾರೆಂದು ನಾನು ಅವರ ವಿರುದ್ಧ ಯಾವುದೇ ಕಾನೂನುಕ್ರಮ ಜರುಗಿಸಿಲ್ಲ. ನಿಮ್ಮ ತಾಯಿ ಹಾಗೂ ಅಣ್ಣ ತಮ್ಮಂದಿರ ವಿರುದ್ಧ ಖಾತೆ ಮಾಡಿಸಿಕೊಂಡಿದ್ದಾರೆಂದು ಯಾವುದಾದರು ಕಾನೂನುಕ್ರಮ ತೆಗೆದುಕೊಂಡಿದ್ದೀರ ಎಂದರೆ ಸಾಕ್ಷಿ ಖಾತೆ ನನ್ನ ಹೆಸರಿನಲ್ಲೆ ಇದೆ ಆದ್ದರಿಂದ ಅವರ ವಿರುದ್ಧ ಕಾನೂನುಕ್ರಮ ತೆಗೆದುಕೊಳ್ಳುವ ಪ್ರಮೇಯ ಬರುವುದಿಲ್ಲ. ನನ್ನ ಹೆಸರಿನಲ್ಲಿ ಖಾತೆ ಆಗಿರುವ ಮ್ಯುಟೇಷನ್ ಆದೇಶವನ್ನು ಹಾಜರುಪಡಿಸಿದ್ದೀರ ಎಂದರೆ ಸಾಕ್ಷಿ ಅದನ್ನು ಕೋರಿ ಅರ್ಜಿ ಕೊಟ್ಟಿದ್ದೆ ಅದು ಲಭ್ಯವಿಲ್ಲ ಎಂದು ಹಿಂಬರಹ ಕೊಟ್ಟಿದ್ದಾರೆ ಎನ್ನುತ್ತಾರೆ.

2. ನಾನು ನನ್ನ ತಂದೆಯ ಜೀವಿತ ಕಾಲದಲ್ಲಿ ಅವರ ಅಚ್ಚುಮೆಚ್ಚುಗೆಯ ಮಗನಾಗಿದ್ದೆ ಎಂದರೆ ಸರಿಯಲ್ಲ. 3 ಜನ ಮಕ್ಕಳ ತರಹ ಇದ್ದೆ. ವಿಭಜನೆಯ ಮೂಲಕ ಖಾತೆ ಆಗಿದೆ ಎಂದು ಆರ್ ಟಿ ಸಿಯಲ್ಲಿ ತೋರಿಸಿದೆ ಆ ರೀತಿ ವಿಭಜನೆ ಆಗಿದೆ ಎಂದು ತೋರಿಸಲು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಈ ಪ್ರಕರಣದಲ್ಲಿರುವ ಸ್ವತ್ತು ವಿಭಾಗದಲ್ಲಿ ನನಗೆ ಬಂದಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಯಾವುದಾದರು ಕುಟುಂಬದಲ್ಲಿ ಅಣ್ಣ ತಮ್ಮಂದಿರು ಬಾಯಿ ಮೂಲಕ ವಿಭಾಗ ಮಾಡಿಕೊಂಡಗ ಎಲ್ಲಾರು ಸೇರಿ ಕಂದಾಯ ಇಲಾಖೆಯಲ್ಲಿ ಹೇಳಿಕೆಯನ್ನು ನೀಡುವುದರ ಮೂಲಕ ಅವರವರ ಭಾಗಕ್ಕೆ ಬಂದ ಆಸ್ತಿಗೆ ಖಾತೆ ಮಾಡಿಸಿಕೊಳ್ಳುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಮ್ಮ ತಂದೆ ಇದ್ದ ಕಾಲಕ್ಕೆ ಅವರು ಇಂತವರಿಗೆ ಇಂತಹ ಜಮೀನು ಎಂದು ಹೇಳಿ ಖಾತೆ ಮಾಡಿಸಿದ್ದಾರೆಂದು ನುಡಿಯುತ್ತಾರೆ. ನನ್ನ ತಂದೆ ಖಾತೆ ಮಾಡಿಸುವಾಗ ಹೇಳಿಕೆ ಕೊಟ್ಟಿದ್ದಾರೆ. ಆ ಹೇಳಿಕೆಯ ದಾಖಲೆಯನ್ನು ಹಾಜರುಪಡಿಸಿದ್ದೀರ ಎಂದರೆ ಸಾಕ್ಷಿ ಬಾಯಲ್ಲಿ ಹೇಳಿದ್ದಾರೆ ಎನ್ನುತ್ತಾರೆ. ಸದರಿ ಹೇಳಿಕೆಯನ್ನು ಹಾಜರುಪಡಿಸಲು ತೊಂದರೆಯಿದೆಯಾ ಎಂದರೆ ಸಾಕ್ಷಿ ಅದು ಸಿಗುವುದಿಲ್ಲ ಎನ್ನುತ್ತಾರೆ.

ಸಾಮಾನ್ಯವಾಗಿ ಕಂದಾಯ ಇಲಾಖೆಯಲ್ಲಿ ಎಂ ಆರ್ ಆದ ನಂತರ ಆರ್ ಟಿ ಸಿಯಲ್ಲಿ ದಾಖಲಾಗುವುದು ಎಂದರೆ ಸರಿ. ಗ್ರಾಮ ಲೆಕ್ಕಾಧಿಕಾರಿಯ ವರದಿ ಹಾಗೂ ರಾಜಸ್ವನಿರಕ್ಷಕರ ಆದೇಶದ ಆಧಾರದ ಮೇಲೆ ಎಂ ಆರ್ ಆಗುತ್ತದೆ ಎಂದರೆ ಸರಿ. ಈ ರೀತಿ ನಿಮಗೆ ಖಾತೆ ಆಗದ ಕಾರಣ ಅದು ಮೋಸದ ಕತೆ ಎಂದರೆ ಸಾಕ್ಷಿ ಅದು ನೂರಕ್ಕೆ ನೂರು ಸುಳ್ಳು ಎನ್ನುತ್ತಾರೆ. ನಾನು ಹಾಗೂ ನಮ್ಮೂರಿನ ಶ್ಯಾನುಬೋಗರು ಚೆನ್ನಾಗಿದ್ದೆವು ಎಂದರೆ ಸರಿಯಲ್ಲ. 1980-81 ನೇ ಸಾಲಿನಲ್ಲಿ ಕೃಷ್ಣಮೂರ್ತಿ ಎಂಬ ಗ್ರಾಮಲೆಕ್ಕಗಿರು ಹಾಗೂ ರಾಜಸ್ವನಿರಕ್ಷಕರು ಇದ್ದರು. ನಾನು ಅವರ ಜೊತೆ ಶಾಮೀಲಾಗಿ ಅವರಿಗೆ ಲಂಚ ಕೊಟ್ಟು ಮೋಸದ ಖಾತೆ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಿಮ್ಮ ತಾಯಿ ಹಾಗೂ ಸಹೋದರರು ಸಮ್ಮತಿ ಸಹಿಯನ್ನು ಖಾತೆ ಮಾಡುವ ಕಾಲಕ್ಕೆ ಹಾಕಿದ್ದಾರ ಎಂದರೆ ಹಾಕಿರುವುದಿಲ್ಲ ನಮ್ಮ ತಂದೆಯೆ ಮಾಡಿಸಿಕೊಟ್ಟಿದ್ದಾರೆ.

3. ಗ್ರಾಮಲೆಕ್ಕಾಧಿಕಾರಿ ಬಳಿ ನೀವು ಒಬ್ಬರೆ ಖಾತೆ ಮಾಡಿಸಿಕೊಳ್ಳಲು ಹೋಗಿದ್ದು ಎಂದರೆ ಸಾಕ್ಷಿ ಕಂದಾಯ ವಸೂಲಿ ಮಾಡಲು ಬಂದಿದ್ದರು ಆಗ ನನ್ನ ತಂದೆ ಅಲ್ಲೆ ಕುಳಿತು 3 ಜನ ಇದ್ದು ಮಾಡಿಸಿರುತ್ತಾರೆ ಎಂದು ನುಡಿಯುತ್ತಾರೆ. ಈ ಅರ್ಜಿಯ ಸ್ವತ್ತು ಮೂಲತಃ ಪಿತ್ರಾರ್ಜಿತ ಸ್ವತ್ತು ಎಂದರೆ ಸರಿ. ವಿಭಾಗ ಪತ್ರದ ಪ್ರಕಾರ ಈ ಪ್ರಕರಣದ ಆಸ್ತಿ ತೀರ್ಪುಋಣಿದಾರರ ಭಾಗಕ್ಕೆ ಬಂದಿದ್ದು, ನನ್ನ ಭಾಗಕ್ಕೆ ಬೇರೆ ಆಸ್ತಿ ಬಂದಿದೆ ಎಂದರೆ ಸರಿಯಲ್ಲ. ಆದ ಕಾರಣ ಈ ಆಸ್ತಿಯ ಮೇಲೆ ನಿಮಗೆ ಹಕ್ಕಿಲ್ಲ ಎಂದರೆ ಸಾಕ್ಷಿ ಹಕ್ಕು ಇರುವುದಕ್ಕಾಗಿಯೇ ನ್ಯಾಯಾಲಯಕ್ಕೆ ಬಂದಿರುವುದು ಎನ್ನುತ್ತಾರೆ. ನನ್ನ ಆಸ್ತಿಗೆ 1980 ರಿಂದ ಇಲ್ಲಿಯವರೆಗೆ ಕಂದಾಯ ಕಟ್ಟಿದ್ದೇನೆ. ಆ ರಶೀದಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಾನು ಕಂದಾಯ ಕಟ್ಟಿಲ್ಲ ಅದೇ ರೀಶಿ ಒಂದು ರಶೀದಿಯನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ವಿಭಾಗ ಪತ್ರದ ಮೂಲಕ ಆಸ್ತಿ ತೀರ್ಪುಋಣಿದಾರರಾದ ನಿಮ್ಮ ತಾಯಿ ಹಾಗೂ ಸಹೋದರರಿಗೆ ಬಂದಿದ್ದು ಅವರು ತೀರ್ಪುದಾರರಿಗೆ ಕ್ರಯದ ಕರಾರು ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸಾಕ್ಷಿ ಅದು ಅವರು ಮೋಸದಿಂದ ಮಾಡಿಕೊಂಡಿದ್ದಾರೆ ಎನ್ನುತ್ತಾರೆ. ನಾನು ಹಾಗೂ ನನ್ನ ತಾಯಿ ಹಾಗೂ ಸಹೋದರರು ಶಾಮೀಲಾಗಿ ಅವರು ನ್ಯಾಯಾಲಯಕ್ಕೆ ಬರಲೆ ಇಲ್ಲ ಎಂದರೆ ಸರಿಯಲ್ಲ. ಊರಲ್ಲಿ ಪಂಚಾಯಿತಿ ಸೇರಿ ರಾಜಿ

ಮಾಡಿಕೊಂಡು ಹುಣಸೂರು ನ್ಯಾಯಾಲಯದಲ್ಲಿ ರಾಜಿ ಅರ್ಜಿ ಸಲ್ಲಿಸಿ ದಾವೆ ರಾಜಿಯಾಗಿದೆ ಎಂದರೆ ಸರಿಯಲ್ಲ. ನಿಮ್ಮ ಮಾತನ್ನು ಕೇಳಿಕೊಂಡು ತೀರ್ಪುಋಣಿದಾರರು ತೀರ್ಪುದಾರರಿಗೆ ಕ್ರಯಪತ್ರ ಮಾಡಿಲ್ಲ ಎಂದರೆ ಸಾಕ್ಷಿ ಅವರು ಹೇಗೆ ಕ್ರಯಪತ್ರ ಮಾಡಿಕೊಡುತ್ತಾರೆ ಆಸ್ತಿ ಶಂಭುಲಿಂಗಪ್ಪನದಾಗಿರುತ್ತದೆ ಎಂದು ನುಡಿಯುತ್ತಾರೆ. ನೀವು ನಿಮ್ಮ ತಾಯಿ ಹಾಗೂ ಸಹೋದರರು ಚೆನ್ನಾಗಿದ್ದೀರಿ ಎಂದರೆ ಸಾಕ್ಷಿ ನನಗೂ ಅವರಿಗೂ ಯಾವುದೇ ಕಾನ್‌ಟ್ಯಾಕ್ಟ್ ಇಲ್ಲ ಎನ್ನುತ್ತಾರೆ. ಅವರು ನಿಮ್ಮನ್ನು ಎತ್ತುಕಟ್ಟಿ ಈ ಅರ್ಜಿ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ಈಗಲೂ ನಾನು ಈ ಅರ್ಜಿಯ ಆಸ್ತಿಯಲ್ಲಿ ಸ್ವಾಧೀನದಲ್ಲಿಲ್ಲ ಎಂದರೆ ಸರಿಯಲ್ಲ. ಖಾತೆ ಕ್ರಮಬದ್ಧವಾಗಿ ಆಗಿಲ್ಲದ ಕಾರಣ ಅದು ಮೋಸದ ಖಾತೆಯಾಗಿದ್ದು ನನಗೆ ಯಾವುದೇ ಆಸ್ತಿಯ ಮೇಲೆ ಹಕ್ಕು ಬರುವುದಿಲ್ಲ ಎಂದರೆ ಸರಿಯಲ್ಲ. ಆದ ಕಾರಣ ನಿಮ್ಮ ತಕರಾರು ಕಾನೂನಿನಡಿ ಊರ್ಜಿತಗೊಳ್ಳುವುದಿಲ್ಲ ಎಂದರೆ ಸರಿಯಲ್ಲ. ನಾನು ಆಸ್ತಿಯ ಮಾಲೀಕ ಎಂದು ತೋರಿಸಲು ಯಾವುದೇ ದಾಖಲು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

(ಸಮಯ ಕೋರಿ ಮುಂದೂಡಲಾಯಿತು)

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.